ಅಧ್ಯಕ್ಷರು: ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ಶಿವಾನಂದನಾಯಕರವರೆ, ತಾವು ಪ್ರಶ್ನೆ ಕೇಳಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಾರ್ತಾ ಮತ್ತು ಪ್ರಚಾರ ಸಚಿವರ ಹೇಳಿಕೆ ಬಗ್ಗೆ ಕ್ಲಾರಿಫಿಕೇಷನ್ ಕೇಳುವ ಕುರಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ನಮ್ಮ ಮಾತನ್ನು ಕೇಳಬೇಕು. ನಾವು ಧರಣಿ ಕುಳಿತು ಎದ್ದುಹೋಗಿದ್ದೇನೆ. ನಿಮ್ಮ ಬಗ್ಗೆ ನಮಗೆ ಸಂಪೂರ್ಣವಾಗಿ ಗೌರವವಿದೆ. ಒಬ್ಬರು ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ ಆ ಹೇಳಿಕೆಯ ಮೇಲೆ ಕ್ಲಾರಿಫಿಕೇಶನ್ ಕೇಳುವುದಕ್ಕೂ ನಮಗೆ ಅವಕಾಶವಿಲ್ಲದಂತೆ ನಮ್ಮ ಆಡಳಿತ ಪಕ್ಷದವರು ನಡೆದುಕೊಳ್ಳುತ್ತಾರೆ ಎನ್ನುವುದಾದರೆ, ನಾನು ಹೇಳುತ್ತೇನೆ, ಪ್ರಜಾತಂತ್ರ ವ್ಯವಸ್ಥೆಯನ್ನೇ ಕಗ್ಗೊಲೆ ಮಾಡುವಂಥದ್ದು, ಇದೊಂದು ಕರಾಳ ದಿನ ಎಂದು ಹೇಳುವುದಕ್ಕೆ ನಾನು ಇಚ್ಚಿಸುತ್ತೇನೆ. ಜವಾಬ್ದಾರಿ ಇರುವಂಥ ಒಂದು ವಿರೋಧ ಪಕ್ಷ ಒಂದು ಕಾನೂನಿನ ಚೌಕಟ್ಟಿನಲ್ಲಿ ಏನು ಅನ್ಯಾಯವಾಗುತ್ತಿದೆ ಎನ್ನುವಂಥದ್ದನ್ನು ತಿಳಿಸುವಂಥ ಪ್ರಯತ್ನವನ್ನು ಮಾಡಿದರೆ ಏಕಾಏಕಿ ಇವೊತ್ತು ಈ ರೀತಿ ಅವರು ನಡೆದುಕೊಳ್ಳುತ್ತಾರೆ ಎನ್ನುವುದಾದರೆ, ಮಾನ್ಯ ಸಚಿವರಾದ ಶಿವರಾಂ ಮೇಲೆ ಒತ್ತಾಯ ತಂದು ಅವರಿಂದ ಹೇಳಿಕೆಯನ್ನು ಕೊಡಿಸುತ್ತಾರೆ ಎನ್ನುವುದಾದರೆ, ನಾನು 'ಈ' ಟಿವಿ ಮತ್ತು 'ಉದಯ' ಟಿವಿ ಯ ಇವೊತಿನ ಸ್ಟೇಟ್‌ಮೆಂಟ್‌ನ್ನು ನಿಮ್ಮ ಕೊಠಡಿಗೆ ತಂದು ಹಾಕಿಸಿ ನೋಡಿಸ್ವಾಮಿ. ಆಗ ನಿಮಗೇ ಅರ್ಥವಾಗುತ್ತದೆ. ಇವೊತ್ತು ಯಾವ ರೀತಿ ಒಬ್ಬ ಪ್ರಾಮಾಣಿಕ ವ್ಯಕ್ತಿ ಇವೊತ್ತಿನವರೆಗೂ ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೋ ಅಂಥವರ ಮೇಲೆ ಒತ್ತಾಯ ತಂದು ಈ ರೀತಿಯಲ್ಲಿ ಒಂದು ಹೇಳಿಕೆಯನ್ನು ಕೊಡಿಸುವಂಥದ್ದು; ಇವೊತ್ತೇನೇ 'ಈ'ಟಿವಿ, 'ಉದಯ' ಟಿವಿ ಯವರು ಮಾಡಿರುವಂಥ ಸಂದರ್ಶನದಲ್ಲಿ ಬಹಳ ಸ್ಪಷ್ಟವಾಗಿ ಅವರು ಹೇಳಿರುವಂಥ ಹೇಳಿಕೆಯನ್ನು ಅವರು ಸಾಬೀತು ಮಾಡಿದ್ದಾರೆ, ಸಾಕ್ಷ್ಯಾಧಾರಗಳಿವೆ, ಹೀಗಿರುವಾಗ ಇನ್ನೊಂದು ಹೇಳಿಕೆಯನು ಕೊಡಿಸಿ ಈ ರೀತಿ ಒಂದು ಅತಂತ್ರ ಸ್ಥಿತಿಯಲ್ಲಿಯೇ ಮುಂದುವರಿಯುವುದಾದರೆ ಈ ಒಂದು ಆಡಳಿತ ಪಕ್ಷ ಸಮ್ಮಿಶ್ರ ಸರ್ಕಾರ ಈ ರಾಜ್ಯದ ಜನರ ಹಿತವನ್ನು ಕಾಪಾಡಬಹುದು ಎಂದು ನಾವು ನಿರೀಕ್ಷೆ ಮಾಡುವುದಕ್ಕಾಗುತ್ತದೆಯೇ? ಇಲ್ಲಿ 'ಏನು ನಡೆಯುತ್ತಿದೆ, 'ಏನು ನಡೆದಿದೆ, ಸಚಿವರು ಬರೆದಂಥ ಪತ್ರವನ್ನು ಟೇಬಲ್ ಮಾಡಿ ಇಲ್ಲಿ ಅಂದರೆ 'ಏಕೆ ಅವರು ಹಿಂದೆಮುಂದೆ ನೋಡುತ್ತಾರೆ?

ಸಚಿವರು ಬರೆದಂಥ ಪತ್ರ ಮನೆ ವ್ಯವಹಾರದ್ದಲ್ಲ ಸ್ವಾಮಿ ಅದು. ಈ ರಾಜ್ಯದ ಜನರಿಗೆ ಸಂಬಂಧಪಟ್ಟಂಥದ್ದು. ಆ ಪತ್ರ ಬರೆದದ್ದು ಏನಿದೆ ಅದನ್ನು ಇವರು ಟೇಬಲ್ ಮಾಡುತ್ತಿಲ್ಲ.

ಅಧ್ಯಕ್ಷರು: ಯಡಿಯೂರಪ್ಪನವರೆ, ನೀವು ವಾರ್ತಾ ಸಚಿವರ ಹೇಳಿಕೆಯನ್ನು ಕೊಡಿಸಬೇಕು ಎಂದು ಕೇಳಿದ್ದೀರಿ. ನಾನು ಹೇಳಿಕೆಯನ್ನು ಕೊಡಿಸಿದ್ದೇನೆ. ಅದು ಎಷ್ಟರಮಟ್ಟಿಗೆ ಸತ್ಯ, ಸುಳ್ಳು ಎಂಬುದು ನನ್ನ ಕನ್‌ಸರ್ನ್‌ಗೆ ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹೇಳಿಕೆಯನ್ನು ಏನು ಬೇಕಾದರೂ ಕೊಡುವುದಕ್ಕೆ ಆಗುವುದಿಲ್ಲ. ಹೇಳಿಕೆಯನ್ನು ಒತ್ತಾಯ ಮಾಡಿ ಕೊಡಿಸುವುದಕ್ಕೆ ಆಗುವುದಿಲ್ಲ ಸ್ವಾಮಿ.

ಅಧ್ಯಕ್ಷರು: ನೋಡಿ, ಈಗ ಐದನೇ ದಿನ ನಡೆಯುತ್ತಿದೆ. ಯಾವುದೇ ಡಿಮ್ಯಾಂಡ್ಸ್ ಬಗ್ಗೆ ತೆಗೆದುಕೊಂಡು ಕಾಲು ಗಂಟೆ ಕೂಡ ಚರ್ಚೆ ಇನ್ನೂ ಆಗಿಲ್ಲ. ಈ ಅಧಿವೇಶನವನ್ನು ಕರೆದಿರುವುದೇ ಡಿಮ್ಯಾಂಡ್ಸ್‌ಗಳ ಬಗ್ಗೆ ಚರ್ಚೆ ಮಾಡುವುದಕ್ಕಾಗಿ, ಅದೇ ಈ ರೀತಿ ಗೊಂದಲದ ವಾತಾವರಣ ಉಂಟಾದರೆ ಯಾವ ರೀತಿ ಸಭೆ ನಡೆಸುವುದು ಹೇಳಿ. ಸಭೆ ನಡೆಸಲು ಯಾರೂ ಕೂಡ ಸಹಕರಿಸದಿದ್ದರೆ ಏನು ಮಾಡುವುದು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ರಾಜ್ಯದಲ್ಲಿ ಎಲ್ಲೂ ಕೂಡ ಒಂದು ಅಭಿವೃದ್ಧಿ ಕಾರ್ಯವೂ ಆಗಿಲ್ಲ. ವರ್ಗಾವಣೆ ದಂಧೆ ಬಿಟ್ಟರೆ ಇನ್ನೇನೂ ಆಗಿಲ್ಲ. ಅಭಿವೃದ್ಧಿ ಕಾರ್ಯ ಏನೂ ಆಗಿಲ್ಲ. ಹೀಗಿರುವಾಗ ಇಲ್ಲಿ ಡಿಮ್ಯಾಂಡ್ ತೆಗೆದುಕೊಂಡು ಏನು ಮಾಡುತ್ತೀರಿ? ಹಿಂದೆ ನಾಲ್ಕು ತಿಂಗಳಿಗೆ ಡಿಮ್ಯಾಂಡ್ ಪಾಸ್ ಮಾಡಿ ಕೊಟ್ಟಿದ್ದೇವು. ಒಂದು ಅಭಿವೃದ್ಧಿ ಕಾರ್ಯ ಆಗಿದೆಯೇ? ಒಂದು ಸಮಿತಿ ರಚನೆ ಮಾಡಿದ್ದಾರೆಯೇ? ಒಂದು ಆಶ್ರಯ ಮನೆಯನ್ನಾದರೂ ಕೊಟ್ಟಿದ್ದಾರೆಯೇ? ಒಂದಾದರೂ ಭಾಗ್ಯಜ್ಯೋತಿ ದೀಪ ಕೊಟ್ಟಿದ್ದಾರೆಯೇ? ಅಕ್ರಮ-ಸಕ್ರಮ ಗೊಂದಲ ಸರಿ ಮಾಡಿದ್ದಾರೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಂನಂತರ ಕ್ಲಾರಿಫಿಕೇಶನ್ ಕೊಡದೆಯೇ ಅವರು ಓಡಿಹೋಗಿದ್ದಾರೆ. ನಾನು ಏಕೆ ಈ ವಿಚಾರ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ ಒಂದು ಕ್ಲಾರಿಫಿಕೇಷನ್ ಏನೇನು ತಪ್ಪಾಗಿದೆ ಎಂದು ಹೇಳಲಿಕ್ಕೆ ತಯಾರಿಲ್ಲದೆ ಅವರು ಓಡಿಹೋದರು. ಈ ರೀತಿ ಪಲಾಯನ ಮಾಡಿದರೆ ನಾವು ಏನು ಮಾಡುವುದು ಸ್ವಾಮಿ?

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ ಅದರ ಮೇಲೆ ಡಿಸ್‌ಕಷನ್ ಮಾಡುವುದಕ್ಕೆ ಅವಕಾಶವಿಲ್ಲ. ನಿಯಮಾವಳಿಗಳ ಪ್ರಕಾರ ತಾವು ಬರೆದುಕೊಟ್ಟರೆ ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನಿಯಮಾವಳಿಗಳ ಪ್ರಕಾರ ಬೇಕಾದಷ್ಟು ರೂಲಿಂಗ್ಸ್ ಇದೆ. ಡಿಸ್‌ಕಷನ್ ಬೇಕು ಎಂದರೆ ನೀವು ನಿಯಮಾವಳಿಗಳ ಪ್ರಕಾರ ರಿಕ್ವಿಸಿಷನ್ ಕೊಡಿ, ನಾನು ಕನ್ಸಿಡರ್ ಮಾಡುತ್ತೇನೆ. ಆದರೆ ಸ್ಟೇಟ್‌ಮೆಂಟ್ ಮೇಲೆ ಡಿಸ್‌ಕಷನ್‌ಗೆ ಅವಕಾಶವಿಲ್ಲ. There are so many things.

ಶ್ರೀ ಕೆ.ಎಸ್.ಈಶ್ವರಪ್ಪ: ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದರೆ ಅದರ ಮೇಲೆ ನಾವು ಕ್ಲಾರಿಫಿಕೇಷನ್ ಕೇಳಿ ಬರುವುದಿಲ್ಲವೆಂದರೆ ಎನರ್ಥ? ಇದು ಯಾವ ನ್ಯಾಯ?

ಅಧ್ಯಕ್ಷರು: ನಿಯಮಾವಳಿ ಪ್ರಕಾರ ನೀವು ಯಾವುದಾದರೂ ಒಂದು ಮೋಷನ್ ಕೊಡಿ. ಅದನ್ನು ನಾನು ಕನ್ಸಿಡರ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸದನಕ್ಕೆ ಅವರು ಅಗೌರವವನ್ನು ತೋರಿಸಿದ್ದಾರೆ.

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳೀ. ಈಗ ವಿಷಯ ಸಮಿತಿಗಳು ಇಲ್ಲ. ವಿಷಯ ಸಮಿತಿಗಳು ಇಲ್ಲದೇ ಇರುವುದರಿಂದ ಹೆಚ್ಚು ದಿನ ಅಧಿವೇಶನ ನಡೆಯವೇಕು ಎಂದೇ ಅಗಸ್ಟ್ 5ನೇ ತಾರೀಖಿನವರೆಗೆ ಚರ್ಚೆಗೆ ನಿಗದಿ ಮಾಡಿರುವುದು. ಈಗ ಐದನೇ ದಿನ ನಡೆಯುತ್ತಿದೆ. ಇನ್ನೂ ಕೂಡ ಡಿಮ್ಯಾಂಡ್ಸ್ ಮೇಲೆ ಸರಿಯಾಗಿ ಚರ್ಚೆಯೇ ಆಗಿಲ್ಲ. ಈ ರೀತಿಯಾದರೆ ಗಿಲಿಟನ್ ಆಗುತ್ತದೆಷ್ಟೆ. ಗಿಲಿಟನ್ ಆದರೆ ಯಾರಿಗೆ ಲಾಭ. ಯಾರಿಗೆ ನಷ್ಟ, ಈ ರಾಜ್ಯದ ಜನತೆಗೆ ನಷ್ಟ. ಆದುದರಿಂದ ನೀವು ಈ ಕಡೆ ಕುಳಿತಿರತಕ್ಕಂಥವರು ಹೆಚ್ಚು...

ಶ್ರೀ ಬಿ.ಎಸ್.ಯಡಿಯೂರಪ್ಪ: ಗಿಲಿಟನ್ ಆಗುವುದು ಈಗಲ್. ತಿಂಗಳ ಕೊನೆಯಲ್ಲಿ.

ಅಧ್ಯಕ್ಷರು: ಆಗ ಅಲ್ಟಿಮೇಟ್ಲಿ ಏನಾಗುತ್ತದೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಮಗೆ ತುಂಬಾ ಗೌರವ ಕೊಟ್ಟು ಒಂದು ಮಾತನ್ನು ಹೇಳುತ್ತೇನೆ. ನಾವು ಡಿಮ್ಯಾಂಡ್ ಮೇಲೆ ಚರ್ಚೆ ಪ್ರಾರಂಭ ಮಾಡಿಲ್ಲವೆ ಸಾರ್? ಅತ್ಯಂತ ಪ್ರಮಾಣಿಕವಾಗಿ ಡಿಮ್ಯಾಂಡ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿಲ್ಲವೆ?

ಅಧ್ಯಕ್ಷರು: ನೀವು ಜವಾಬ್ದಾರಿ ಇರತಕ್ಕಂಥ ಸದಸ್ಯರು. 5ನೇ ದಿನ...

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಪೂರ್ಣ ಮಾಡುತ್ತೇನೆ. ಇನ್ನೂ 30 ದಿವಸ ಅಧಿವೇಶನ ಇದೆ. ಹೌದಾ? ನಾನೇ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಂದೊಂದು ಬೇಡಿಕೆ ಬಗ್ಗೆ 2 ರಿಂದ 3 ದಿನ ಚರ್ಚೆಯಾಗಬೇಕು. ಎಲ್ಲರೂ ಭಾಗವಹಿಸಬೇಕು ಎಂದು ಹೇಳಿದ್ದೇನೆ. ಇಲ್ಲಿ ಪ್ರಶ್ನೆ ಏನೆಂದರೆ ಎಲ್ಲಾ ಬೇಡಿಕೆಗಳನ್ನು ಗಿಲಿಟನ್‌ಗೆ ಹಾಕುವುದಲ್ಲ. ಇದು ತಮ್ಮ ಬಾಯಿಂದ ಏಕೆ ಬಂತೋ ಗೊತ್ತಿಲ್ಲ.

ಅಧ್ಯಕ್ಷರು: ಅದು ಆ ರೀತಿ ಆಗುತ್ತದೆ. ಹಾಕುವುದಲ್ಲ. ಎಲ್ಲಾ ಇದೇ ರೀತಿ ಆದರೆ ಡಿಮ್ಯಾಂಡ್ ಅನ್ನು ಹಾಕಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲ, ಹಾಗೆ ಆಗುವ ಪ್ರಶ್ನೇನೆ ಇಲ್ಲ. ಯಾವಾಗ ಸರ್ಕಾರ ಉತ್ತರ ಕೊಡುವುದಕ್ಕೆ ಆಗದೆ ಹೇಗೋ ಅಧಿವೇಶನ ಮಾಡಿ ಮುಗಿಸಬೇಕು ಎಂದರೆ ಇವತ್ತೇ ಮಾಡಿ. ನಮ್ಮದೇನೂ ಅಭ್ಯಂತರ ಇಲ್ಲ. ಜನ ತೀರ್ಮಾನ ಮಾಡುತ್ತಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾಲೀಕರು ಅವರು ಆದರೆ, ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ,

ಅಧ್ಯಕ್ಷರು: ಈಗ ಏನಾಗಿದೆ ಎಂದರೆ, ಪರಿಸ್ಥಿತಿ ಅಲ್ಲಿಗೆ ಲೀಡ್ ಆಗುತ್ತಿದೆ ಎಂದು ನಾನು ಹೇಳುತ್ತಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲ, ನಾನು ಚೇರ್‌ಗೆ ವಿನಂತಿ ಮಾಡುತ್ತಿರುವುದೇನೆಂದರೆ ಇವತ್ತು ಪ್ರತಿಪಕ್ಷವಾಗಿ ಇದೆಲ್ಲವನ್ನೂ ಕಣ್ಣು ಮುಚ್ಚಿಕೊಂಡು ನೋಡುವುದಕ್ಕಾಗುವುದಿಲ್ಲ. ಇವರ ಕಚ್ಚಾಟದಿಂದ ಒಂದು ಸಮಿತಿ ಕೂಡ ಆಗಲಿಲ್ಲ. ಇವತ್ತು ಪತ್ರಿಕೆಯಲ್ಲಿ ನೋಡುತ್ತಿದ್ದೀರಿ. ಮಾನ್ಯ ಚೆನ್ನಿಗಪ್ಪನವರ ಸ್ಟೇಟ್‌ಮೆಂಟ್ ಇರಬಹುದು, ಹೊರಟ್ಟಿಯವರ ಹೇಳಿಕೆ ಇರಬಹುದು, ಜೆಡಿಎಸ್ ಕಾರ್ಯಾಧ್ಯಕ್ಷ ಕುಮಾರಸ್ವಾಮಿಯವರ ಹೇಳಿಕೆ ಇರಬಹುದು, ಮಾನ್ಯ ಶಿವಕುಮಾರ್ ರವರ ಹೇಳಿಕೆ ಇರಬಹುದು, ಮಾನ್ಯ ಜನಾರ್ಧನ ಪೂಜಾರಿಯವರ ಹೇಳಿಕೆ ಇರಬಹುದು, ಈ ರೀತಿ ಆರೋಪ ಪ್ರತ್ಯಾರೋಪದಲ್ಲಿ ತೊಡಗಿರುವಂತಹ ಅವರುಗಳಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿಲ್ಲ. ಆದುದರಿಂದ ನಾನು ಹೇಳುತ್ತಿರುವುದು ಮಾನ್ಯ ಶಿವರಾಂ ಅವರನ್ನು ಕಳೆದ 20 ವರ್ಷದಿಂದ ನೋಡಿಕೊಂಡು ಬಂದಿದ್ದೇನೆ. ಅತ್ಯಂತ ಪ್ರಮಾಣಿಕ ವ್ಯಕ್ತಿ. ನಿರ್ದಾಕ್ಷಿಣವಾಗಿ ಇದ್ದುದ್ದನ್ನು ಇದ್ದಂತೆ ಹೇಳುವಂತಹವರು. ಇವತ್ತು ಬೆಳಿಗ್ಗೆ ತಮ್ಮ ಅಳಲನ್ನು ಈಟಿವಿ, ಉದಯ ಟಿವಿ ಮುಂದೆ ತೋಡಿಕೊಂಡಿರುವುದನ್ನು ಇಡೀ ರಾಜ್ಯದ ಜನ ನೋಡಿದ್ದಾರೆ. ಇಲ್ಲಿ ಅವರಿಗೆ ಒತ್ತಾಯ ಮಾಡಿ ಬೇರೆ ರೀತಿಯಲ್ಲೇ ಒಂದು ಸತ್ಯಕ್ಕೆ ದೂರವಾದ ಒಂದು ಹೇಳಿಕೆಯನ್ನು ಕೊಡಿಸಿದರೆ ಅದನ್ನು ವಿರೋಧ ಪಕ್ಷವಾಗಿ ನಾವು ಕೇಳಿ

ಸುಮ್ಮನೆ ಕುಳಿತುಕೊಳ್ಳಬೇಕು ಅಂದರೆ ಜನ ನಮ್ಮ ಬಗ್ಗೆ ಏನು ಹೇಳುತ್ತಾರೆ ಸ್ವಾಮಿ. ಇದು ಬೇರೆಯವರ ಒಳ ವಿಚಾರಗಳು ಅಲ್ಲ. ಈ ರಾಜ್ಯದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವಂತಹ ವಿಷಯ ಚರ್ಚೆಗೆ ಬಂದಾಗ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ಏನು?

ಅಧ್ಯಕ್ಷರು: ಈಗ ಆಡಳಿತ ಪತ್ರಿಕೆಯಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನೇನು ಸಲಹೆ ಕೊಟ್ಟೆ, ನಾನು ಇನ್ನೇನು ಒತ್ತಾಯ ಮಾಡಲಿಲ್ಲ. ಸತ್ಯ, ಅಸತ್ಯ ನಿಮ್ಮ ಚೇರ್‌ಗೆ ಬಿಟ್ಟಿದ್ದು. ನಿಮ್ಮ ಕೊಠಡಿಯೊಳಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಶಿವರಾಂ ಅವರುಗಳನ್ನು ಕರೆಯುರಿ. ಈಟಿವಿ, ಉದಯ ಟಿವಿ ಪ್ರಚಾರವಾಗಿರತಕ್ಕ ಕ್ಯಾಸೆಟ್ ನಾನು ತಂದು ಕೊಡುತ್ತೇನೆ. ಈಗ ತರಿಸಿಕೊಂಡಿದ್ದೇನೆ. ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಇವತ್ತು ಎಂದು ತಾವು ನೋಡಿ. ಅವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆಯಾದರೆ, ಅವರಿಬ್ಬರಲ್ಲಿ ಒಬ್ಬರನ್ನು ಮನೆಗೆ ಕಳುಹಿಸಲಿ. ಇಲ್ಲ ಸರ್, ಇಲ್ಲಿ ಸಚಿವರೊಬ್ಬರು ಮನಬಂದಂತೆ ಈ ರೀತಿ ಮಾಡಿದರೆ, ಇಲ್ಲಿ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ. ಅವರು ಓತ್ ತೆಗೆದುಕೊಂಡು ಬಂದು ಸರ್ಕಾರದ ಮೇಲೆ ಆರೋಪ ಮಾಡಿದರೆ, ಅದು ಮಾನ್ಯ ಹೊರಟ್ಟಿಯವರು ಮಾಡುವಂತಹ ಆರೋಪ ಇರಬಹುದು, ಮಾನ್ಯ ಚೆನ್ನಿಗಪ್ಪ ಮಾಡಿರುವಂತಹ ಆರೋಪ ಇರಬಹುದು, ಮಾನ್ಯ ಶಿವರಾಂ ಅವರು ಮಾಡಿರುವಂತಹ ಆರೋಪ ಇರಬಹುದು ಸಚಿವರುಗಳು ಈ ರೀತಿ ಆರೋಪ, ಪ್ರತ್ಯಾರೋಪದಲ್ಲಿ ತಲ್ಲೀನರಾಗಿದ್ದಾರೆ. ಇದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆಯೆಂಬುದು ನಮ್ಮ ಚಿಂತೆ. ನಿಮ್ಮ ಅಂಕಿ ಅಂಶಗಳನ್ನು ತೆಗೆಸಿ ನೋಡಿ. 4 ತಿಂಗಳಿನದು ನಾವು ಬಜೆಟ್ ಪಾಸ್ ಮಾಡಿ ಕೊಟ್ಟೆವು ಒಂದು ರೂಪಾಯಿಯಷ್ಟು ಅಭಿವೃದ್ಧಿ ಕಾರ್ಯಕ್ಕೆ ಹಣವನ್ನು ಖರ್ಚು ಮಾಡಲಿಲ್ಲ. ಅವರಿಗೆ ಪುರುಸೊತ್ತು ಇಲ್ಲ. ಅವರು ಒಳಜಗಳ ಕಚ್ಚಾಟದಲ್ಲಿ ತೊಡಗಿದ್ದಾರೆ. ಇದು ಒಂದು ಸಲ ತೀರ್ಮಾನವಾದರೆ ಒಬ್ಬರು ಸಚಿವ ಮನೆಗೆ ಹೋದರೆ ಮಾನ್ಯ ಧರ್ಮಸಿಂಗ್ ಅವರ ಕೈ ಶಕ್ತಿಯಿಂದ ಒಳ್ಳೆಯ ರೀತಿ ಒಂದು ಆಡಳಿತವನ್ನು ಕೊಡಬಹುದು. ಅವರೂ ಕೂಡ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ದೂರುತ್ತಿಲ್ಲ. ಯಾವುದೇ ಮಾನ್ಯ ಮುಖ್ಯಮಂತ್ರಿಗಳು ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದಕ್ಕೆ ಆಗದೆ ಉಸಿರು ಕಟ್ಟುವಂತಹ

ಪರಿಸ್ಥಿತಿಯಲ್ಲಿ ಅವರು ಹೇಗೋ ಈ ಸರ್ಕಾರವನ್ನು ಮುಂದೆ ತೆಗೆದುಕೊಂಡು ಹೋಗುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನ್ನದೇನೂ ಆರೋಪ ಇಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು, ಈ ರೀತಿ ಸಚಿವರಲ್ಲೇ ಭಿನ್ನಾಭಿಪ್ರಾಯ ಬಂದಾಗ ಯಾರ ಮೇಲೂ ಕ್ರಮ ತೆಗೆದುಕೊಳ್ಳದೆ, ಕೇವಲ ಅವರ ಕುರ್ಚಿ ಉಳಿದುಕೊಳ್ಳುವುದಕ್ಕೋಸ್ಕರ ಮುಂದೆ ಹೋಗುತ್ತೇನೆ ಅಂದರೆ ಇದನ್ನು ನಡೆಸಿಕೊಂಡು ವಿರೋಧ ಪಕ್ಷದಲ್ಲಿ ನಾವು ಕುಳಿತು ಕೊಳ್ಳುವುದಕ್ಕಾಗುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಪಾತ್ರ ಆಡಳಿತ ಪಕ್ಷಕ್ಕಿಂತ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ನಾವೆಲ್ಲವನ್ನೂ ಕೈಕಟ್ಟಿಕೊಂಡು ಕುಳಿತುಕೊಂಡು ಹೋದರೆ ನಾಳೆ ನಮ್ಮನ್ನು ಜನ ಕೇಳುತ್ತಾರೆ. ಏನ್ರಿ ಮಾಡುತ್ತೀರಿ ಯಡಿಯೂರಪ್ಪನವರೆ, ವಿರೋಧ ಪಕ್ಷದಲ್ಲಿ 79 ಜನ ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ನೀವಿದ್ದೀರಿ, ಇಂತಹ ಸಂದರ್ಭ ಬಂದಾಗ ಏನು ಮಾಡುತ್ತಿದ್ದೀರಿ ಎಂದು ಕೇಳಿದಾಗ ನಾನು ಉತ್ತರ ಏನು ಕೊಡಲಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ನಿಯಮಾವಳಿಗಳ ಪ್ರಕಾರ ಈ ಸದನ ನಡೆಯಬೇಕು. ಈಗ ಏನಾಗಿದೆ ಎಂದರೆ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದು ಮುಕ್ತಾಯವಾಗಿದೆ. ನೀವು ಬೇರೆ ಯಾವುದಾದರೂ ಇದ್ದರೆ ಸಂಬಂಧಪಟ್ಟ ನಿಯಮಗಳ ಮೇಲೆ ತನ್ನಿ. ಅದನ್ನು ಕನ್ಸಿಡರ್ ಮಾಡಿ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಈ ಧರಣಿ ಏನಿದೆ ಅದನ್ನು ಅಂತ್ಯ ಮಾಡಿ. ನಾನು ಎಲ್ಲಾ ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ ನಿಮ್ಮ ನಿಮ್ಮ ಸೀಟುಗಳಿಗೆ ಹೋಗಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಆಧಾರ ಸ್ಥಂಬ ಮಾಧ್ಯಮ. ಇವತ್ತು ಅಲ್ಪಸ್ವಲ್ಪ ಏನಾದರೂ ವಿಶ್ವಾಸ ಉಳಿದಿದ್ದರೆ, ಜನ ವಿಶ್ವಾಸ ಇಟ್ಟಿದ್ದರೆ, ಅದು ಮಾಧ್ಯಮದಿಂದ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾದಿಂದ, ಹಾಡುಹಗಲಿನಲ್ಲಿ ಈ ರೀತಿ ಹೇಳಿಕೆಗಳು ಬಂದಮೇಲೂ ಸಹ ಆ ಸುಳ್ಳನ್ನು ತಿರುಚಿ ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಇವರು ಕೊಡುತ್ತಾರೆಂದರೆ ಇದೊಂದು ಲಜ್ಜೆಗೆಟ್ಟ ಪ್ರದರ್ಶನ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೊಂದು ಬೆತ್ತಲೆಯಾಯಿತು ಇವತ್ತು ಸರ್ಕಾರ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇದು ಯಾರಿಗೂ ಗೌರವ ತರುವಂತಹ ಸಂಗತಿಯಲ್ಲಿ ಸ್ವಾಮಿ. ಅದಕ್ಕಾಗಿ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಿಮ್ಮ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ನಿಮ್ಮ ಕೊಠಡಿಗೆ ಕರೆದುಕೊಂಡು ಹೋಗಿ, ಕರೆಯಿರಿ ಸಂಬಂಧಪಟ್ಟವರನ್ನು ಈಟಿವಿ, ಉದಯ ಟಿವಿ ಕ್ಯಾಸೆಟ್ ಹಾಕಿ. ಅವರ

ಹೇಳಿಕೆಗೂ ಅದಕ್ಕೂ ತದ್ವಿರುದ್ಧವಾಗಿದೆ ಎಂದು ನಿಮಗೆ ಮನವರಿಕೆಯಾದರೆ ಆಗ ನೀವು ತೀರ್ಮಾನ ತೆಗೆದುಕೊಳ್ಳಿ. ನಾವು ವೈಯಕ್ತಿಕವಾಗಿ ಯಾರ ಮೇಲೂ ಆರೋಪ ಮಾಡುತ್ತಿಲ್ಲ. ಮಾನ್ಯ ಶಿವರಾಂ ಆಗಲಿ ಮಾನ್ಯ ರೇವಣ್ಣ ಆಗಲಿ ನಮ್ಮ ಆತ್ಮೀಯ ಸ್ನೇಹಿತರು. ವೈಯಕ್ತಿಕವಾಗಿ ಯಾವುದೇ ವ್ಯಕ್ತಿಗಳ ಮೇಲೆ ಆರೋಪ, ಪ್ರತ್ಯಾರೋಪ ಇಲ್ಲ. ಇವತ್ತು ಈ ನಾಡಿನ ಜನರ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗಿದೆ. ಇವರ ಕಚ್ಚಾಟದಿಂದ ಒಂದು ಸಮಿತಿ ಮಾಡುವುದಕ್ಕಾಗಿಲ್ಲ. ಅಧಿಕಾರಿಗಳು ಮುಂದೆ ಏನು ಮಾಡಬೇಕೆಂದು ದಿಕ್ಕು ತೋಚದೆ ಕೈಕಟ್ಟಿಕೊಂಡು ಕುಳಿತುಕೊಂಡಿರುವಂತಹ ಸಂದರ್ಭ ಇದೆ. ಯಾವುದು ಸರಿ, ಯಾವುದು ತಪ್ಪು ಎಂದು ಯೋಚನೆ ಮಾಡುವುದಕ್ಕೆ ಆಗದೆ ಇರುವಂತಹ ಉಸುರು ಕಟ್ಟುವಂತಹ ಸಂದರ್ಭವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಆಗದೆ, ಕೈಕಟ್ಟಿಕೊಂಡು ಕುಳಿತುಕೊಂಡಿರುವಂತಹ ಒಂದು ವಿಚಿತ್ರವಾದಂತಹ ಸನ್ನಿವೇಶ. ಇದನ್ನು ಸಹಿಸಿಕೊಂಡು ವಿರೋಧ ಪಕ್ಷ ಇರಬೇಕೆಂದು ಹೇಗೆ ನಿರೀಕ್ಷೆ ಮಾಡುತ್ತೀರಿ ಸ್ವಾಮಿ? ಇದು ಆಗುವುದಿಲ್ಲ. ಅದಕ್ಕಾಗಿ ನಿಮ್ಮನ್ನು ಏನು ವಿನಂತಿ ಮಾಡುತ್ತಿದ್ದೇನೆ ಎಂದರೆ, ನಿಮ್ಮ ಕೊಠಡಿಯಲ್ಲಿ ಈಟಿವಿ ಯ ಹಾಗೂ ಉದಯ ಟಿವಿಯ ಕ್ಯಾಸೆಟ್ ನೋಡಿದಮೇಲೆ, ನಾನು ಹೇಳುವುದು ಸತ್ಯವಲ್ಲವೆಂದರೆ, ನಾನು ನೀವು ಹೇಳಿದಂತೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಈಗ ಏನಾಗಿದೆ, ದಯಮಾಡಿ ಕೇಳಿ...

ಶ್ರೀ ಜಗದೀಶ್ ಶೆಟ್ಟರ್: ಮಾಧ್ಯಮದಲ್ಲಿ ಬಂದಂತಹ ಹೇಳೀಕೆಗಳು, ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಬಂದಂತಹ ಹೇಳಿಕೆಗಳನ್ನು ಇವತ್ತು ಸಚಿವರು ಡಿಸ್ಕೈನ್ ಮಾಡುತ್ತಾರೆ. ಅಂದರೆ ಹೇಗೆ? ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ. ಇದು ಒಂದು ಹೇಳಿಕೆ ಅಲ್ಲ ಅಧ್ಯಕ್ಷರೆ, ಕಳೆದ 15 ದಿವಸಗಳಿಂದ ಮೂರ್ನಾಲ್ಕು ಹೇಳಿಕೆಗಳು ಮಾನ್ಯ ಶಿವರಾಂ ಅವರದು ಬಂದಿವೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ನನ್ನ ಮಾತು ಕೇಳಿ, ಈ ಸದನದ ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ. ನಾನು ಚೀಪ್ ಮಿನಿಸ್ಟರ್ ಅನ್ನು ಕರೆಸುತ್ತೇನೆ ಎಂದು ಸ್ಟೇಟ್‌ಮೆಂಟ್ ಮಾಡಿದೆ. ಆದಾದ ಮೇಲೆ ವಾರ್ತಾ ಸಚಿವರು. ಸ್ಟೇಟ್‌ಮೆಂಟ್ ಮಾಡಿದರು ಇನ್ನೇನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆ ಹೇಳಿಕೆಯನ್ನು ಅವರು ಡಿಸ್ಯೆನ್ ಮಾಡುತ್ತಾರೆಂದರೆ ಇದು ಸದನಕ್ಕೆ ಒಬ್ಬ ಸಚಿವರು ಅಗೌರವ ತೋರಿಸಿದಂತಾಗುತ್ತದೆ.

ಅಧ್ಯಕ್ಷರು: ಇಲ್ಲ, ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ. ನಿಮಗೆ ಇಷ್ಟ ಬಂದ ರೀತಿಯಲ್ಲಿ ಮಾಡಲು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಯಾವ ನಿಯಮಾವಳಿ ಪ್ರಕಾರ ಕರೆಸಬೇಕು, ಇದನ್ನು ಮುಂದುವರೆಸಬೇಕು ಎಂದು ತನ್ನಿ. ನಾನು ಕನ್ಸಿಡರ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸದನ ಬಿಟ್ಟು ಓಡಿಹೋಗಿದ್ದಾರೆ. ಸದನದಲ್ಲಿ ಇರಬೇಕಾಗಿತ್ತು ಮಾನ್ಯ ಶಿವರಾಂ ಅವರು. ಅವರಿಗೆ ಸದನದಲ್ಲಿ ಮುಖ ತೋರಿಸುವುದಕ್ಕಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಏನಾಗಿದೆ, ಅವರೇನಾದರೂ ವ್ಯತಿರಕ್ತವಾಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದರೆ, ಇನ್ನೊಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರೆ, ಅದನ್ನು...

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಬಲವಂತಹ ಮಾಫ ಸ್ನಾನವನ್ನು ಸರ್ಕಾರದವರು ಮಾಡಿದ್ದಾರೆ.

ಅಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೆ, ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ. ಇಲ್ಲಿ ಧರಣಿ ಮುಖಾಂತರ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಪೀಠಕ್ಕೂ ತನ್ನದೇ ಆದಂತಹ ಕರ್ತವ್ಯಗಳಿಗೆ. ನನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕಾದರೆ ನಿಯಮಾವಳಿಗಳ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಬ್ಬ ಮಂತ್ರಿಗಳು ಇವತ್ತು ಹೇಳಿಕೆ ಕೊಟ್ಟನಂತರ ನಮಗೆ ಸ್ಪಷ್ಟೀಕರಣ ಕೇಳಲು...

ಅಧ್ಯಕ್ಷರು: ಅವರು ಸರಿಯಾಗಿ ಹೇಳಿಕೆ ಕೊಡದೇ ಇದ್ದರೆ, ಇನ್ನೊಂದು ಮಾಡಿದರೆ ಯಾವ ನಿಯಮದ ಪ್ರಕಾರ ಅದನ್ನು ಚರ್ಚೆ ಮಾಡಬೇಕು. ಇನ್ನೊಂದು ಮಾಡಬೇಕೆಂದು ತನ್ನಿ. ಅದನ್ನು ನಾನು ಕನ್ಸಿಡರ್ ಮಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈಟಿವಿಯಲ್ಲಿ, ಉದಯಟಿವಿಯಲ್ಲಿ ಬಂದಂತಹ ಇಂಟರ್‌ವ್ಯೂ, ಅದು ಸುಳ್ಳಾ ಹಾಗಾದರೆ? ಇವತ್ತು ಪತ್ರಿಕಾ ಮಾಧ್ಯಮದಲ್ಲಿ ಬಂದಂತಹ ಹೇಳಿಕೆಯನ್ನು ಡಿನೈ ಮಾಡಿದರು. ಹಾಗಾದರೆ

ಎಲೆಕ್ಟ್ರಾನಿಕ್ ಮಾಧ್ಯಮದ ಮುಖಾಂತರ ಬಂದಂಥದ್ದು, ಇವತ್ತು ಬೆಳಿಗ್ಗೆ ಪ್ರಸಾರವಾಗಿದೆ. ಹಾಗಾದರೆ ಅದನ್ನೂ ಅವರು ಇವತ್ತು ಡಿನೈ ಮಾಡುತ್ತಾರೆಂದರೆ, ಇವತ್ತು ಸದನಕ್ಕೆ ಒಬ್ಬ ಮಂತ್ರಿ ಅಗೌರವ ಕೊಡುವಂತಹ ಕೆಲಸ ಮಾಡುತ್ತಿದ್ದಾರೆ. ಬಹಳ ಅತ್ಯಂತ ಘನತೆ ಈ ಸದನಕ್ಕೆ ಇದೆ. ಅಗೌರವ ಕೊಡುವಂತಹ ಕೆಲಸವನ್ನು ಮಂತ್ರಿಗಳು ಮಾಡಿದ್ದಾರೆ. ಇದು ಸರೀನಾ ಹಾಗಾದರೆ? ಇದರ ಬಗ್ಗೆ ತನಿಖೆ ಆಗಬೇಕಾದರೆ, ಅದಕ್ಕಾಗಿ, ತಾವು ದಯವಿಟ್ಟು ಪ್ರತಿಪಕ್ಷದ ನಾಯಕರು ಹೇಳಿದ ಪ್ರಕಾರ ಈಟಿವಿ ಹಾಗೂ ಉದಯ ಟಿವಿಯಲ್ಲಿ ಬಂದಿರುವುದನ್ನು ತಾವು ತರಿಸಿ ನೋಡಿಬೇಕಾದರೆ ಕೊಡುತ್ತೇವೆ.

ಅಧ್ಯಕ್ಷರು: ನಾನು ಒಂದು ಮಾಡು ಹೇಳುತ್ತೇನೆ, ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದು ಮುಗಿದ ಅಧ್ಯಾಯ. ಇನ್ನು ಏನಾದರೂ ತೆಗೆದುಕೊಳ್ಳಬೇಕಾದರೆ ಯಾವ ನಿಯಮಾವಳಿಯಲ್ಲಿ ಅದನ್ನು ಡಿಸ್‌ಕಷನ್ ಮಾಡಬೇಕೆಂದು ತನ್ನಿ. ಕನ್ಸಿಡರ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಆ ಹೇಳಿಕೆ ಕೊಟ್ಟು ಸದನವನ್ನು ಬಿಟ್ಟು ಹೋಗಿಬಿಟ್ಟರು.

ಅಧ್ಯಕ್ಷರು: ಇಲ್ಲಿ ನಿಯಮಾವಳಿ ಪ್ರಕಾರ ಕೆಲಸ ಮಾಡಬೇಕೇ ಹೊರತು, ಈ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಈಗ ನಾನು ಪ್ರಶ್ನೋತ್ತರ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ಪ್ರಶ್ನೋತ್ತರ. ಶಿವಾನಂದ ನಾಯಕರವರೆ

(ಗೊಂದಲ)

ಅಧ್ಯಕ್ಷರು: ಶ್ರೀರಾಮರೆಡ್ಡಿಯವರು, ನೀವು ಪ್ರಶ್ನೆಯನ್ನು ಕೇಳಿ

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, 4604ನೇ ಪ್ರಶ್ನೆಯನ್ನು ನಾನು ಸನ್ಮಾನ್ಯ...

(ಗೊಂದಲ)

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೆ, ನೀವು ಪ್ರಶ್ನೆಯನ್ನು ಕೇಳಿ, ಇದೆಲ್ಲಾ ಇದ್ದಿದ್ದೇ.

(ಗೊಂದಲ)

ಅಧ್ಯಕ್ಷರು: ಇದೇ ರೀತಿ ಮುಂದುವರೆಸಿದರೆ ಅದು ಚೆನ್ನಾಗಿ ಇರುವುದಿಲ್ಲ. ನೀವು ಈ ಸದನದಲ್ಲಿ ಹೇಗೆ ಗೌರವಯುತವಾಗಿ

ನಡೆದುಕೊಳ್ಳಬೇಕು ಆ ರೀತಿ ನಡೆದುಕೊಳ್ಳಿ. ಈ ನೆಲದಲ್ಲಿ ನಿಂತುಕೊಂಡು ಈ ರೀತಿ ನಡೆಸುವುದು ಸರಿಯಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈ ಒಂದು ಪ್ರೆಸ್ ಕಟಿಂಗ್ ನಿಮಗೆ ಕಳುಹಿಸಿಕೊಡುತ್ತೇನೆ. ಸನ್ಮಾನ್ಯ ಹೊರಟ್ಟಿಯವರು ಇಲ್ಲಿ ಬಂದಿದ್ದಾರೆ. 'ಈ' ಸರ್ಕಾರದಲ್ಲಿ ನಾನು ಮಂತ್ರಿ, ನನ್ನ ಮಾತು ನಡೆಯುವುದಿಲ್ಲ. ನಾನು ಹೇಳುವ ಯಾವುದೇ ಕೆಲಸ ಆಗುವುದಿಲ್ಲ. ಏನೇ ಪ್ರಸ್ತಾವನೆ ಕಳುಹಿಸಿದರು. ಶಿಫಾರಸ್ಸು ಮಾಡಿದರೂ ಮುಖ್ಯಮಂತ್ರಿಗಳು ಮಾಡುವುದಿಲ್ಲ. ಮಾನ್ಯ ಧರ್ಮಸಿಂಗ್ ಅವರಿಗೆ ಬೆಂಬಲ ನೀಡಿದ ತಪ್ಪಿಗೆ ಪ್ರತಿಯೊಂದಕ್ಕೂ ನಾನು ಭಿಕ್ಷೆ ಬೇಡಬೇಕಾಗಿದೆ. ಎಂದು ಸನ್ಮಾನ್ಯ ಹೊರಟ್ಟಿಯವರು ಹೀಗೆ ಹೇಳುತ್ತಾರೆ.

ಹೀಗೆ ಪ್ರತಿನಿತ್ಯ ಒಬ್ಬೊಬ್ಬ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆಂದು ಆದರೆ, ಈ ರಾಜ್ಯದ ಜನತೆಯ ರಕ್ಷಣೆಯನ್ನು ಇವರು ಮಾಡಬಲ್ಲದೇನು? ಈ ರಾಜ್ಯದ ಜನತೆ ಇವರ ಮೇಲೆ ನಂಬಿಕೆಯನ್ನು ಇಡಬಹುದೇನು? ವಿಶ್ವಾಸ ಇಡಬಹುದೇನು? ಸಚಿವ ಸಂಪುಟದ ಬಹುತೇಕ ಸದಸ್ಯರು ಆರೋಪ, ಪ್ರತ್ಯಾರೋಪದಲ್ಲಿ ತೊಡಗಿದರೆ, ಮುಂದೆ ಈ ಜನರ ಭವಿಷ್ಯ ಏನು?

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಜನತೆ ಬಹಳ ಬುದ್ಧಿವಂತರು ಇದ್ದಾರೆ. ನೀವು ತಿಳಿದುಕೊಂಡಂತೆ ಜನರು ದಡ್ಡರು ಅಲ್ಲ.

ಅಧ್ಯಕ್ಷರು: ನೀವು ಎಲ್ಲಾ ಜವಾಬ್ದಾರಿಯುತ ಸದಸ್ಯರಾಗಿದ್ದೀರಿ. ಈ ರಾಜ್ಯದ ಜನತೆ ನಿಮ್ಮನ್ನು ಆರಿಸಿ ಈ ಸಭೆಗೆ ಕಳುಹಿಸಿದ್ದಾರೆ. ಆದುದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಇದೆ, ಅದನ್ನು ಹೇಳಲಾ... ಸ್ವಾಮಿ. ನೀವು ಇಲ್ಲಿಗೆ ಬಂದಿದೀರಿ. ಗೌರವದಿಂದ ನಿಂತುಕೊಳ್ಳಿ. ಈ ಸಭಾ ಕಲಾಪಕ್ಕೆ ತಾವು ಅಡ್ಡಿಯನ್ನುಂಟು ಮಾಡಬಾರದು. ದಯಮಾಡಿ ಸುಮ್ಮನೆ ನಿಂತುಕೊಳ್ಳಿ, ಮಾತನಾಡಬೇಡಿ, ಇದು ಏನು? ನಾಯ್ಡುರವರು ರೇಗ ಪತ್ರಿಕೆಗಳಲ್ಲಿ ಬಂದಿರುವಂಥಾದ್ದನ್ನು ನನಗೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಕಳುಹಿಸಿದ್ದಾರೆ. ಇಲ್ಲಿ ಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೋ ಅದನ್ನು ನಾವು ನಂಬಬೇಕೇ ಹೊರತು, ಉಳಿದದ್ದನ್ನು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ದಯಮಾಡಿ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರೆ, ಯಾವ ನಿಯಮಾವಳಿಯ ಮೇಲೆ ಎಂಬುದನ್ನು ನೋಟೀಸ್ ಕಳುಹಿಸಿ, ಅದಕ್ಕೆ ನಾನು

ಅವಕಾಶವನ್ನು ಮಾಡಿಕೊಡುತ್ತೇನೆ. ತಮಗೆ ಡಿಸ್‌ಕಷನ್ ಅವಕಾಶವನ್ನು ಮಾಡಿಕೊಡುತ್ತೇನೆ. ಅದು ಬಿಟ್ಟು ಈ ರೀತಿ ಸಭೆ ನಡೆಯುವುದಕ್ಕೆ ಅಡ್ಡಿಯನ್ನುಂಟು ಮಾಡತಕ್ಕಂಥಾದ್ದು, ಇದು ಯಾರಿಗೂ ಗೌರವವನ್ನು ತರತಕ್ಕಂಥಾದ್ದು ಅಲ್ಲ ತಾವು ದಯಮಾಡಿ ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ಅಪೇಕ್ಷೆ ಅದು ಅಲ್ಲ. ಈಗ ಮಾನ್ಯ ಬಿ.ಎಸ್.ಹೊರಟ್ಟಿಯವರ ಹೇಳಿಕೆಯನ್ನು ನಾನು ನಿಮಗೆ ಕಳುಹಿಸಿಕೊಟ್ಟಿದ್ದೇನೆ. ಇವತ್ತು ಕಳ್ಳಬಟ್ಟಿ ನನ್ನ ವಿರುದ್ಧ ನಡೆಸಿರುವ ಪಿತೂರಿ ನಡೆಯುತ್ತಾ ಇದೆ ಅವರು ಹೇಳುತ್ತಾರೆ. ನಾನು ಏನೂ ಎಂದೆಲ್ಲಾ ಹೇಳಿದ್ದಾರೆ. ಸ್ವಾತಂತ್ರ್ಯವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು, ಅವರು ಹೇಳುತ್ತಾರೆ ಈ ರೀತಿಯಾಗಿ ಕಚ್ಚಾಡುವಂತಹ ಸಚಿವರು ಏನು ಆಡಳಿತವನ್ನು ಕೊಡಬಹುದು?

ಅಧ್ಯಕ್ಷರು: ಈಗ ಯಾವ ನಿಯಮಾವಳಿಯ ಕೆಳಗಡೆ ಡಿಸ್‌ಕಸ್ ಮಾಡುವುದಕ್ಕೆ ಅವಕಾಶವಿದೆಯೆಂಬುದನ್ನು ಕಳುಹಿಸಿ, ಅದನ್ನು ನಾನು ಕನ್ಸಿಡರ್ ಮಾಡುತ್ತೇನೆ. ನಂತರ ನೀವು ಚರ್ಚೆ ಮಾಡಿ, ಅದನ್ನು ಬಿಟ್ಟು ಸುಮ್ಮನೆ ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ. ಈ ಸಭೆಯ ಕಲಾಪ ನಡೆಯುವುದಕ್ಕೆ ಅಡ್ಡಿಯನ್ನುಂಟು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಹಾವು ಮುಂಗಸಿ ಒಂದಾಗುವುದಕ್ಕೆ ಸಾಧ್ಯವಿಲ್ಲ. ಇವರು ಹಾವು ಮುಂಗುಸಿ ರೀತಿಯಲ್ಲಿ ಕಚ್ಚಾಡುತ್ತಿರುತ್ತಾರೆ. ಮತ್ತೆ ಒಂದಾಗುತ್ತಾರೆ. ರಾಜ್ಯದ ಜನತೆಯನ್ನು ಯಾಮಾರಿಸುವುದಕ್ಕೆ ಆಗುವುದಿಲ್ಲ. ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುವಂತಹ ಕೆಲಸವಾಗುತ್ತಿದೆಯೆಂದು ಜನ ಮಾತನಾಡುತ್ತಿದ್ದಾರೆ. ಇಲ್ಲಿ ಎಷ್ಟು ದಿವಸ ಸಾಧ್ಯವೋ ಅಷ್ಟು ದಿವಸ ಕಬಳಿಸಿಕೊಂಡು ಹೋಗೋಣವೆಂದು ಜನ ಮಾತನಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಂತ್ರಿಗಳೇ ಭ್ರಷ್ಟಾಚಾರದ ಆರೋಪವನ್ನು ಮಾಡುತ್ತಿದ್ದಾರೆ. ಇಲ್ಲಿ ನಾವು ಏನು ಮಾಡಬೇಕು ಹೇಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಕೆಲವು ಮಾತುಗಳನ್ನು ನಾನು ಒಪ್ಪುತ್ತೇನೆ. ನಿಮಗೆ ಅವರ ಕಿವಿ ಹಿಂಡುವಂತಹ ಮತ್ತು ಎಚ್ಚರಿಸುವಂತಹ ಆ ಅಧಿಕಾರ, ಅವಕಾಶ ಇದೆ. ಆದರೆ ಇದು ಯಾವ ನಿಯಮದಡಿಯಲ್ಲಿ ಚರ್ಚೆಯಾಗಬೇಕೆಂಬುದು ಆಗಬೇಕು. ಇಲ್ಲಿ ಈ ರೀತಿ

ಆಗಬಾರದು, ಇದು ಚರ್ಚೆಯಾಗಬೇಕು. ತಾವು ಯಾವ ನಿಯಮದಡಿಯಲ್ಲಿ ಇದನ್ನು ಪ್ರಸ್ತಾಪ ಮಾಡಬೇಕೆಂಬುದನ್ನು ನನಗೆ ಕಳುಹಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇಲ್ಲಿ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಹೊತ್ತಿರುವಂತಹ ಸಚಿವ ಸಂಪುಟದ ಸದಸ್ಯರುಗಳು, ಈ ರೀತಿಯಾಗಿ ಸಾರ್ವಜನಿಕವಾಗಿ ಹೇಳಿಕೆಯನ್ನು ಕೊಡುವಂಥಾದ್ದು ಯಾವ ನ್ಯಾಯ? ಇವರು ಸಂವಿಧಾನ ಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ತಾವು ದಯಮಾಡಿ ಕೇಳಿ. ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ. ಇದು ಚರ್ಚೆಯಾಗಲಿ. ಈ ರೀತಿ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಸಚಿವರುಗಳು ಪ್ರಮಾಣ ವಚನವನ್ನು ಸ್ವೀಕರಿಸಿದ್ದು, ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಸಚಿವ ಸಂಪುಟದಲ್ಲಿ ಇದೆ. ಇಲ್ಲಿ ಒಬ್ಬೊಬ್ಬ ಸಚಿವರು ಒಂದೊಂದು ರೀತಿಯ ಹೇಳಿಕೆಯನ್ನು ಬೀದಿಯಲ್ಲಿ ಕೊಡುವುದಾದರೆ, ಇದು ಒಂದು ಜವಾಬ್ದಾರಿಯುತ ಸರ್ಕಾರ ನಡೆದುಕೊಳ್ಳುವಂತಹ ರೀತಿನಾ? ಇದನ್ನು ಮಾನ್ಯ ಮುಖ್ಯಮಂತ್ರಿಯವರು ಸಹಿಸಿಕೊಂಡು ಇರುತ್ತಾರಾ?

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ಅದನ್ನು ಯಾವ ರೀತಿಯಲ್ಲಿ ಕಿವಿ ಹಿಂಡಬೇಕೋ ಆ ರೀತಿಯಲ್ಲಿ ಹಿಂಡಿ, ಅದು ಈ ರೀತಿಯಲ್ಲಿ, ಇಲ್ಲಿ ಸದಸ್ಯರುಗಳನ್ನು ಸದನದ ಬಾವಿಯಲ್ಲಿ ಕಳುಹಿಸಿ ನೀವು ಮಾಡುವಂಥಾದ್ದು ಅಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಕಳೆದ 50 ವರ್ಷಗಳಿಂದ ಈ ರೀತಿಯ ಒಂದು ದೂರಾಡಳಿತಕ್ಕೆ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದೆ. ಇವತ್ತು ಆ ರೀತಿಯ ಒಂದು ಪರಿಸ್ಥಿತಿ ಇದೆ.

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ಘನತೆ, ಗೌರವವನ್ನು ಇಷ್ಟು ಕೆಳಗೆ ತೆಗೆದುಕೊಂಡು ಹೋಗುವಂಥಾದ್ದು ಆಗಬಾರದು. ದಯಮಾಡಿ ಚರ್ಚೆ ಮಾಡಬೇಕೆಂದರೆ, ಕುಳಿತು ಚರ್ಚೆಯನ್ನು ಮಾಡಲಿ. ಅದು ಬಿಟ್ಟು ಈ ರೀತಿ ಮಾಡುವಂಥಾದ್ದು ಸರಿಯಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ನಿಯಮಾವಳಿಯ ಪ್ರಕಾರ ನಡೆದುಕೊಳ್ಳಿ. ಸಭೆಯಲ್ಲಿ ಶಿಸ್ತು ಬರುವ ಹಾಗೆ ಮಾಡಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಮಾನ್ಯ ಸದಸ್ಯರು: ಪ್ರತಿ ದಿವಸ ಇದೇ ರೀತಿಯಾದರೆ ಕಲಾಪವನ್ನು ನಡೆಸುವುದು ಹೇಗೆ?

(ಗೊಂದಲ)

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ನಡೆಸುವುದಕ್ಕೆ ದಯಮಾಡಿ ಅವಕಾಶವನ್ನು ಕೊಡಬೇಕು. ಇಲ್ಲಿ ಮಾನ್ಯ ಸದಸ್ಯರು ಗಲಾಟೆ ಮಾಡದೇ ನಿಂತುಕೊಳ್ಳಬೇಕು. ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ ನಾನು ಕೇಳಿದರೆ ಏನಾದರೂ ಕೇಳಿಸುತ್ತದಾ? ಇಲ್ಲಿ ಹೌಸ್ ಅನ್ನು ಆರ್ಡರ್‌ನಲ್ಲಿ ಇಡುವುದಕ್ಕೆ ಆಗದೇ, ನಮ್ಮನ್ನು ಪ್ರಶ್ನೆ, ಕೇಳಿ ಎಂದರೆ, ಮೊದಲು ಹೌಸ್ ಅನ್ನು ಆರ್ಡರ್‌ನಲ್ಲಿ ಇಡಿ, ಆಮೇಲೆ ನಾವು ಪ್ರಶ್ನೆಯನ್ನು ಕೇಳುತ್ತೇನೆ. ಇಲ್ಲಿ ಘೋಷಣೆಯನ್ನು ಕೂಗುತ್ತಿರಬೇಕಾದರೆ, ನಾವು ಪ್ರಶ್ನೆಯನ್ನು ಕೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ತಾವುಗಳು ಯೋಚನೆ ಮಾಡಿ. ಈ ರೀತಿ ನೀವು ನಡೆದುಕೊಳ್ಳುತ್ತಿರುವಂಥಾದ್ದು ಸರಿಯೇ ಎಂಬುದನ್ನು ತಾವು ದಯಮಾಡಿ ಯೋಚನೆ ಮಾಡಿ.

(ಗೊಂದಲ)

(ಬಾವಿಯಿಂದ ಬಿಜೆಪಿ ಸದಸ್ಯರಿಂದ ಘೋಷಣೆ)

ಅಧ್ಯಕ್ಷರು: ಈ ರೀತಿ ಏಕೆ ಕೂಗಿಕೊಳ್ಳುತ್ತೀರಾ? ನೀವು ಈ ರೀತಿ ಸಭೆ ನಡೆಸುವುದಕ್ಕೆ ಅಡ್ಡಿಪಡಿಸಿದರೆ, ನಾನು ಬೇರೆ ರೀತಿಯಲ್ಲಿ ಯೋಚನೆಯನ್ನು ಮಾಡಬೇಕಾಗುತ್ತದೆ. ದಯಮಾಡಿ ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಡಿ. ಈಗ ಸಭೆಯನ್ನು ನಡೆಸುವಂಥಾದ್ದಕ್ಕೆ ಈ ಕಡೆ ಇರುವಂಥವರು ಕರ್ತವ್ಯದ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ನೀವು ಪ್ರತಿ ದಿವಸ ಸದನಕ್ಕೆ ಬಂದು ಹೀಗೆ ಆಡಬೇಕು, ಹಾಗೆ ಆಡಬೇಕೆಂದು ಎಲ್ಲೋ ಹೋಗಿ ನಿಂತುಕೊಂಡರೆ, ನೀವು ಈ ಸಭೆ ನಡೆಯುವಂಥಾದ್ದಕ್ಕೆ, ಅಡ್ಡಿಯನ್ನು ಪಡಿಸುತ್ತಿದ್ದೀರಿ. ನಿಮಗೆ ಚರ್ಚೆಯಲ್ಲಿ ಭಾಗವಹಿಸುವಂಥಾದ್ದಕ್ಕೆ ಆಸಕ್ತಿ ಇಲ್ಲವೆಂದು ಜನರಿಗೆ ಅರ್ಥ ಆಗುತ್ತದೆ. ಅದನ್ನು ತಾವು ದಯಮಾಡಿ ತಿಳಿದುಕೊಳ್ಳಿ. ನಿಮಗೆ ಚರ್ಚೆಯಲ್ಲಿ ಭಾಗವಹಿಸುವ ಆಸಕ್ತಿ ಇದ್ದಿದ್ದರೆ ಡಿಮಾಂಡ್ಸ್ ಮೇಲೆ ಚರ್ಚೆ ಮಾಡುತ್ತಾ ಇದ್ದೀರಿ. ಸಭೆಯನ್ನು ಕಾನೂನು ನಿಯಮಾವಳಿಯ ಪ್ರಕಾರ ನಡೆಸುವಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ನಾನು ವಿಷಾದದಿಂದ ಹೇಳುತ್ತೇನೆ, ಈ ರಾಜ್ಯದ ಜನತೆಗೆ ತಪ್ಪು ಸಂದೇಶವನ್ನು ಕಳುಹಿಸುತ್ತಿದ್ದೀರಿ. ಆದುದರಿಂದ ನಿಮಗೇ ತೊಂದರೆಯಾಗುತ್ತದೆ. ದಯಮಾಡಿ

ಅದನ್ನು ನೀವು ತಿಳಿದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಒಂದಲ್ಲ? ಇನ್ನೊಂದು ಸಾರಿ ಯೋಚನೆ ಮಾಡಿ.

(ಗೊಂದಲ)

ಅಧ್ಯಕ್ಷರು: ದಿನಾಂಕ 06.07.2005ರ 24ನೇ ಪಟ್ಟಿಯಲ್ಲಿನ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 179 ಪ್ರಶ್ನೆಗಳ ಪೈಕಿ 143 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ–1

ಈಗ ನಾಳೆ ಬೆಳಿಗ್ಗೆ 11.00 ಗಂಟೆಗೆ ಪುನಃ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 7ನೇ ಜುಲೈ 2005ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

346(4065); ಶ್ರೀ ಶಿವಾನಂದ ನಾಯಕ್ (ಭಟ್ಕಳ); ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಭಟ್ಕಳದ ತಾಲ್ಲೂಕು ಆಸ್ಪತ್ರೆಯಲ್ಲಿ ಖಾಲಿ ಇರುವ ಸರ್ಜನರ ಹುದ್ದೆಯನ್ನು ಭರ್ತಿ ಮಾಡುವಲ್ಲಿ ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮವೇನು;

ಆ) ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಖಾಲಿ ಇರುವ ಹುದ್ದೆಯನ್ನು ಯಾವಾಗ ತುಂಬಲಾಗುವುದು;

ಇ) ಈ ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟಂ ಮಾಡುವಾಗ ವೈದ್ಯರಿಗೆ ಸಹಕರಿಸುವ ಗ್ರೂಪ್ ಡಿ ಹುದ್ದೆ ಖಾಲಿ ಇರುವುದು ನಿಜವೇ;

ಈ) ಇದರಿಂದ ತುರ್ತು ಅವಧಿಯಲ್ಲಿ ಶವ ಪರೀಕ್ಷೆಗೆ ವಿಳಂಬವಾಗಿ ವಾರಸುದಾರರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಸರ್ಕಾರದ ನಿಲುವೇನು;

ಉ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬುವಲ್ಲಿ ಸರ್ಕಾರ ಯಾವ ಕ್ರಮಕೈಗೊಂಡಿದೆ. ವಿವರ ಒದಗಿಸುವುದು?